**ದಿನಾಂಕಃ 18.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು: ಶ್ರೀ ಕೆ ಆರ್ ಆರ್., ವಾದಿ ಪರ ವಕೀಲರಿಂದ</u>**

**9.** ವ್ಯಾಜ್ಯದ ಜಮೀನನ್ನು ಮಾರಾಟ ಮಾಡಲು ಒಪ್ಪಿಕೊಂಡು ದಿ. 22.09.2015 ರಂದು ವಾದಿ ಕೃಷ್ಣಮೂರ್ತಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರಕ್ಕೆ ನಾನು ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆಂದರೆ ಸರಿ, ಸಾಕ್ಷಿಯೂ ಸಹಿ ಹಾಗೂ ಹೆಬೆಟ್ಟಿನ ಗುರುತು ನನ್ನದೇ ಆದರೆ ನಾನು ಪತ್ರವನ್ನು 1 ಲಕ್ಷ ಸಾಲದ ಬಾಬ್ತು ಖಾಲಿ ಪತ್ರಕ್ಕೆ ಬರೆದುಕೊಟ್ಟಿದ್ದು ಶ್ರೀನಿವಾಸ್ ರವರಿಗೆ ಎಂದು ನುಡಿಯುತ್ತಾರೆ. ಕ್ರಯದ ಕರಾರು ಪತ್ರಕ್ಕೆ ನಾನು 19,00,000/- ಮುಂಗಡ ಪಡೆದಿರುತ್ತೇನೆಂದರೆ ಸರಿಯಲ್ಲ. ಕ್ರಯದ ಕರಾರು ಪತ್ರವನ್ನು ಬರೆಯಲು ಬೇಕಾದ ಬಾಂಡ್ ಪತ್ರವನ್ನು ನಾನೇ ಖರೀದಿಸಿ ಚೈತನ್ಯ ಎಂಬ ಪತ್ರ ಬರಹಗಾರರಿಂದ ಒಕ್ಕಣೆಕೆಗಳನ್ನು ಹೇಳಿ ಬರೆಸಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗಳ ಸಮಕ್ಷಮ ನಾನು ಹಾಗೂ ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**10.** ನಾನು ಮೇಲೆ ಹೇಳಿದ ಶ್ರೀನಿವಾಸ್ ಈಗ ಬದುಕಿರುತ್ತಾರಾ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು ಶ್ರೀನಿವಾಸ್ ರವರಿಂದ 1 ಲಕ್ಷ ಸಾಲ ಪಡೆದು ಅವರಿಗೆ ನಿಪಿ-1 ರ ಬಾಂಡ್ ಪತ್ರವನ್ನು ಕೊಟ್ಟಿದ್ದೆ ಎಂದು ರುಜುವಾತು ಪಡಿಸಲು ಶ್ರೀನಿವಾಸ್ ರವರಿಗೆ ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ಕೊಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯೂ ಅವರ ಪರಿಸ್ಥಿತಿ ಹೆಗೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ ನೋಡಬೇಕು ಎಂದು ನುಡಿಯುತ್ತಾರೆ. ನಿಪಿ-1 ರ ಬಾಂಡ್ ಪತ್ರವನ್ನು ಖರೀದಿಸುವಾಗ ವಾದಿ ಕೃಷ್ಣಮೂರ್ತಿಯ ಹೆಸರಿನ ಬದಲಾಗಿ ಶ್ರೀನಿವಾಸ್ ಎಂಬುವವರ ಹೆಸರನ್ನು ಉದ್ದೇಶಪೂರ್ವಕವಾಗಿ ಬರೆಸಿ ಖರೀದಿಸಿರುತ್ತೇನೆಂದರೆ ಸರಿಯಲ್ಲ.

**11.** ನಾನು ಸಹಿ ಮಾಡಿದ ಒಂದು ಚೆಕ್ ಹಾಗೂ ಬಾಂಡ್ ಪತ್ರವನ್ನು ವಾದಿ ಕೃಷ್ಣಮೂರ್ತಿ ರವರ ಪಂಪ್ ಹೌಸ್ ನಲ್ಲಿ ಇಟ್ಟಾಗ ಅದನ್ನು ಅವರು ಕಳ್ಳತನ ಮಾಡಿರುತ್ತಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದು ಈ ಬಗ್ಗೆ ನಾನು ಪೋಲಿಸರಿಗೆ ದೂರನ್ನು ನೀಡಿರುತ್ತೇನೆ. ಕಳ್ಳತನವಾಗಿರುವ ವಿಚಾರ ನನಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯೂ ಈ ಕೇಸಿನಲ್ಲಿ ನೋಟಿಸು ಬಂದಾಗ ವಕೀಲರು ಕೇಸಿನ ವಿಚಾರ ತಿಳಿಸಿದಾಗ ಗೊತ್ತಾಯಿತು ಎಂದು ನುಡಿಯುತ್ತಾರೆ.

**12.** 2018 ನೇ ಇಸವಿಯಲ್ಲಿ ವಾದಿ ಕೃಷ್ಣಮೂರ್ತಿ ಜಮೀನಿನಿಂದ ಆಚೆ ಹಾಕಿರುತ್ತಾನೆ. ಈ ಬಗ್ಗೆ ನಾನು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಯಾವ ಕಾರಣಕ್ಕೆ ಜರುಗಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯೂ ಅವರ ಜಮೀನು ಅವರು ಕಳುಹಿಸಿದ್ದಾರೆ ಎಂದು ನುಡಿಯುತ್ತಾರೆ. ವಾದಿ ಕೃಷ್ಣಮೂರ್ತಿ ನನಗೆ ದಿ. 23.09.2019 ರಂದು ನೋಟಿಸನ್ನು ಕಳುಹಿಸಿದನು ಎಂದರೆ ಸರಿ. ಸದರಿ ನೋಟಿಸಿಗೆ ದಿ. 30.09.2019 ರಂದು ನಾನು ಪ್ರತ್ಯುತ್ತರವನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಪ್ರತ್ಯುತ್ತರದಲ್ಲಿ ವಾದಿ ಕೃಷ್ಣಮೂರ್ತಿ ನನಗೆ ಸೇರಿದ 1 ಬಾಂಡ್ ಪತ್ರವನ್ನು ಹಾಗೂ ಚೆಕ್ ನ್ನು ಕಳ್ಳತನ ಮಾಡಿರುತ್ತಾರೆ ಎಂದು ಹೇಳಿ ಬರೆಸಿರುವ ಬಗ್ಗೆ ಹೇಳಲು ನೆನಪಿರುವುದಿಲ್ಲ. ನಾನು ದಿ. 29.01.2020 ರಂದು ವಾದಿ ಕೃಷ್ಣಮೂರ್ತಿ ವಿರುದ್ಧ ದೂರನ್ನು ನೀಡಿರುತ್ತೇನೆ. ಈ ದಾವೆಯನ್ನು ದಾಖಲಿಸಿದ ನಂತರ ನಾನು ಠಾಣೆಗೆ ದೂರನ್ನು ನೀಡಿರುತ್ತೇನೆಂದರೆ ಸಾಕ್ಷಿಯೂ ಹೌದು ಅದು ನಿಜ ದಾವೆಯನ್ನು ದಾಖಲಿಸಿದ ನಂತರ ಎಲ್ಲಾ ವಿಚಾರ ಗೊತ್ತಾಗಿ ದೂರನ್ನು ನೀಡಿರುತ್ತೇನೆಂದು ನುಡಿಯುತ್ತಾರೆ.

**13.** ನಾನು ದಿ. 30.01.2020 ರಂದು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆಂದರೆ ಸಾಕ್ಷಿಯೂ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು 4 ಎಕರೆ ಜಮೀನನ್ನು ಮಾರಾಟ ಮಾಡಿರುವ ಬಗ್ಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ. ನನ್ನ ಹೆಸರಿಗೆ ಖಾತೆ ಮಾಡಿಸಲು ಅರ್ಜಿಯನ್ನು ಕೊಟ್ಟಿದ್ದು ಇಲ್ಲಿಯವರೆಗೂ ಖಾತೆ ಆಗಿರುವುದಿಲ್ಲ, ಕಾರಣ ವಾದಿ ಕೃಷ್ಣಮೂರ್ತಿ ತಕರಾರು ನೀಡಿರುತ್ತಾನೆ. ಸಾಕ್ಷಿಯೂ ಪುನಃ ಮುಂದುವರೆದು ವಾದಿ ಕೃಷ್ಣಮೂರ್ತಿ ಉದ್ದೇಶಪೂರ್ವಕವಾಗಿ ಒಬ್ಬ ನಾರಾಯಣಪ್ಪನ ಕಡೆಯಿಂದ ಕೂಡ ಸುಳ್ಳು ತಕರಾರನ್ನು ನೀಡಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಕೃಷ್ಣಮೂರ್ತಿ ಯಾವಾಗ ತಕರಾರು ನೀಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ.

**14.** ಈ ದಾವೆ ಚಾಲ್ತಿಯಲ್ಲಿರುವವರೆಗೂ ವ್ಯಾಜ್ಯದ ಜಮೀನನ್ನು ಮಾರಾಟ ಮಾಡಬಾರದೆಂದು ದಿ. 23.10.2020 ರಂದು ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶ ಆದ ನಂತರ ನಾನು ಖಾತೆ ಮಾಡಿಸಲು ಅರ್ಜಿ ನೀಡಿರುತ್ತೇನೆಂದರೆ ಸರಿ. ಸಾಕ್ಷಿಯೂ ಮುಂದುವರೆದು ಪರಬಾರೆ ಮಾಡಬಾರದೆಂದು ಆದೇಶ ಇದ್ದರೂ ಕೂಡ ನನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಬಾರದೆಂದು ಆದೇಶ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಖಾತೆ ಮಾಡಿಸಿಕೊಂಡು ಬೇರೆಯವರಿಗೆ ಮಾರಾಟ ಮಾಡಲು ಹೊರಟಾಗ ವಾದಿ ಕೃಷ್ಣಮೂರ್ತಿ ತಕರಾರು ನೀಡಿರುವುದು ಎಂದರೆ ಸರಿಯಲ್ಲ. ನಾನು ಖಾತೆ ಮಾಡಿಸಿಕೊಳ್ಳಲು ಅರ್ಜಿಯೂ ವಿಲೇ ಆಗಿ ಯಥಾಸ್ಥಿತಿ ಕಾಪಾಡುವಂತೆ ಆದೇಶವಾಗಿದೆ ಎಂದರೆ ಸರಿ.

**15.** ಯಾರೂ ಕೂಡ ಕೈ ಸಾಲ ಪಡೆಯುವಾಗ ಖಾಲಿ ಪತ್ರಕ್ಕೆ ಸಹಿ ಮಾಡುವುದಿಲ್ಲ ಎಂದರೆ ಸಾಕ್ಷಿಯೂ ಹಣದ ಅವಶ್ಯಕತೆ ಇದ್ದಾಗ ಕೊಡುವವರ ಕೋರಿಕೆಯ ಮೇರೆಗೆ ಮಾಡಬೇಕಾಗುತ್ತದೆ ಅದರಂತೆಯೇ ನಾನು ಕೂಡ ಮಾಡಿರುತ್ತೇನೆಂದು ನುಡಿಯುತ್ತಾರೆ. ನಾನು ಶ್ರೀನಿವಾಸ್ ರವರಿಗೆ ಖಾಲಿ ಪತ್ರಕ್ಕೆ ಸಹಿ ಮಾಡಿ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಹಿ ಮಾಡಿ ಇಟ್ಟಿದ್ದ ಚೆಕ್ ನ ನಂಬರ್ ಹೇಳಲು ನೆನಪಿರುವುದಿಲ್ಲ. ನಾನು ವಾದಿ ಕೃಷ್ಣಮೂರ್ತಿ ರವರ ಪಂಪ್ ಹೌಸ್ ನಲ್ಲಿ ಸಹಿ ಮಾಡಿ ಖಾಲಿ ಬಾಂಡ್ ಪತ್ರ ಹಾಗೂ ಚೆಕ್ ನ್ನು ಇಟ್ಟಿರಲಿಲ್ಲ ಎಂದರೆ ಸರಿಯಲ್ಲ. ಅದನ್ನು ವಾದಿ ಕೃಷ್ಣಮೂರ್ತಿ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ.

**16.** ನಾನು ವಾದಿ ಕೃಷ್ಣಮೂರ್ತಿಯ 1 ಲಕ್ಷ ಬಾಕಿ ಪಡೆದುಕೊಂಡು ಕ್ರಯ ಪತ್ರವನ್ನು ಬರೆದುಕೊಡಲು ನಾನು ಬದ್ಧನಿರುತ್ತೇನೆಂದರೆ ಸರಿಯಲ್ಲ. ವಾದಿ ಕೃಷ್ಣಮೂರ್ತಿ 1 ಲಕ್ಷ ಬಾಕಿ ಕೊಡಲು ನನ್ನ ಬಳಿ ಸುಮಾರು ಸಾರಿ ಬಂದಿದ್ದರು ಎಂದರೆ ಸರಿಯಲ್ಲ. ಆದರೆ ನಾನು ಹಣವನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈಗಲೂ ಕೂಡ 1 ಲಕ್ಷ ಬಾಕಿ ಕೊಡಲು ಬದ್ಧನಿರುತ್ತೇನೆಂದರೆ ಸರಿಯಲ್ಲ.

**17.** ನಿಡಿ-12 ರಿಂದ 14 ರ ದಾಖಲೆಯನ್ನು ಈ ದಾವೆಗೊಸ್ಕರ ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.